1. 1993-94ನೇ ಸಾಲಿನಲ್ಲಿ 3.88 ಲಕ್ಷ ಸಸಿಗಳನ್ನು ರೈತರಿಗೆ ಉತ್ಪಾದಿಸಿ ವಿತರಿಸುವ ಕಾರ್ಯಕ್ರಮಗಳನ್ನು ತೋಟಗಾರಿಕೆ ಇಲಾಖೆ ಹಮ್ಮಿಕೊಂಡಿದೆ.

2. ರೂ.5 ಲಕ್ಷಗಳ ವೆಚ್ಚದಲ್ಲಿ 71 ವಾಣಿಜ್ಯ ಹೂಬೆಳೆ ಪ್ರಾತ್ಯಕ್ಷತಾ ತಾಕುಗಳನ್ನು ಏರ್ಪಡಿಸಲಾಗಿದೆ. ವಾಣಿಜ್ಯ ಹೂ ಬೆಳೆಗಳ ಬೇಸಾಯ ಹಾಗೂ ಅಭಿವೃದ್ಧಿಗೆ ಪ್ರಾಶಸ್ತ್ಯ ನೀಡಲಾಗುತ್ತಿದೆ.

3. ತೋಟಗಾರಿಕೆಯಲ್ಲಿನ ಇತ್ತೀಚಿನ ಬೆಳವಣಿಗೆ ಬಗ್ಗೆ ಅರಿವು ಮೂಡಿಸಲು ಜಿಲ್ಲೆಯಲ್ಲಿ ಕ್ಷೇತ್ರೋತ್ಸವ ಪ್ರದರ್ಶನಗಳು ಹಾಗೂ ವಿಚಾರ ಸಂಕಿರಣಗಳು ಮತ್ತು ಇತರ ಕಾರ್ಯಕ್ರಮಗಳನ್ನು ನಡೆಸಲಾಗುವುದು.

4. ಈ ಜಿಲ್ಲೆಯ ಆಲಮಟ್ಟಿ ತಾಲ್ಲೂಕಿನಲ್ಲಿ ಇರುವ ಸುಸಜ್ಜಿತ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ ರೈತರ ಮಕ್ಕಳಿಗೆ 10 ತಿಂಗಳ ತರಬೇತಿ ನೀಡಲಾಗುವುದು.

5. ಒಟ್ಟು 307 ಎಕರೆ ತೋಟಗಾರಿಕೆ ಬೆಳೆಗಳಿಗೆ 'ನಬಾರ್ಡ್,' ಸಾಲಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

6. ಬಿಜಾಪುರ ಜಿಲ್ಲೆಯ ಬಾಗಲಕೋಟೆಯ ತೋಟಗಾರಿಕಾ ಕಛೇರಿಯಲ್ಲಿ (ಮಣ್ಣು ಪರೀಕ್ಷಾ)ಪ್ರಯೋಗಶಾಲೆಯನ್ನು ರೈತರ ತೋಟಗಳ ಮಣ್ಣು ಮತ್ತು ನೀರಿನ ಮಾದರಿಗಳ ವಿಶ್ಲೇಷಣೆಗಾಗಿ ಸ್ಥಾಪಿಸಲಾಗಿದೆ.

7. ಜಿಲ್ಲಾವಲಯ ಯೋಜನೆಗಳು, ರಾಜ್ಯವಲಯ ಯೋಜನೆಗಳು, ಕೇಂದ್ರವಲಯ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳಡಿ ಅನೇಕ ಸೌಲಭ್ಯಗಳನ್ನು ನೀಡಲಾಗುತ್ತಿದೆ.

8. ವಿಶೇಷ ಯೋಜನೆಗಳಡಿ ಜಿಲ್ಲೆಯಲ್ಲಿನ ಬರಪೀಡಿತ ಪ್ರದೇಶ ಅಭಿವೃದ್ಧಿಗಾಗಿ ಅಧಿಕ ಸಂಖ್ಯೆಯಲ್ಲಿ ತೋಟಗಾರಿಕೆ ಕಸಿ : ಸಸಿಗಳನ್ನು ಉತ್ಪಾದನೆ ಮಾಡಿ ಶೇ .75ರ ಸಹಾಯಧನದಲ್ಲಿ ರೈತರಿಗೆ ವಿತರಿಸಲಾಗುವುದು.

9. ಖಾಸಗಿ ಜಮೀನುಗಳಲ್ಲಿ ಹಣ್ಣಿನ ತೋಟಗಳ ನಿರ್ಮಾಣ ಹಾಗೂ ಹಣ್ಣಿನ ತೋಟಗಳ ನಿರ್ವಹಣೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಹಣ್ಣಿನ ತೋಟಗಳನ್ನು ನಿರ್ಮಿಸಲು ಬೇಕಾಗುವ ಕಸಿಸಸಿಗಿಡಗಳನ್ನು ರೈತರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ.

ವಿಷಯ : ಸಂಚಾರಿ ತಾಲ್ಲೂಕು ಕಛೇರಿಗಳ ಸ್ಥಾಪನೆ ಬಗ್ಗೆ

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 352(229)

ಶ್ರೀ ಆರ್. ದಯಾನಂದರಾವ್(ಗಾಂಧಿನಗರ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶೃಂಗೇರಿಯಲ್ಲಿ ಸಂಚಾರಿ ತಾಲ್ಲೂಕು ಕಛೇರಿಯನ್ನು ಪ್ರಾರಂಭಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಈ ಸಂಚಾರಿ ತಾಲ್ಲೂಕು ಕಛೇರಿಗೆ ವಾಹನವನ್ನು ಒದಗಿಸಲಾಗಿದೆಯೇ?

ಇ) ಇದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತಿದೆಯೇ?

ಈ) ಹಾಗಿದ್ದಲ್ಲಿ, ರಾಜ್ಯದ ಇತರ ತಾಲ್ಲೂಕುಗಳಲ್ಲೂ ಈ ರೀತಿಯ ಸಂಚಾರಿ ತಾಲ್ಲೂಕು ಕಛೇರಿಗಳನ್ನು ಪ್ರಾರಂಭಿಸಲಾಗುವುದೇ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು)

ಹೌದು

ಇಲ್ಲ

ಅನುಕೂಲವಾಗುತ್ತಿದೆ.

ರಾಜ್ಯದ ಉಳಿದ ತಾಲ್ಲೂಕುಗಳಲ್ಲಿ ಸಂಚಾರಿ ತಾಲ್ಲೂಕು ಕಛೇರಿಗಳನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ವಿಷಯ : - ಲಾಲ್‌ಬಾಗ್ ಹಾಗೂ ಕಬ್ಬನ್ ಪಾರ್ಕ್‌ಗಳನ್ನು ಅಭಿವೃದ್ಧಿಗೊಳಿಸುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 353(228)

ಶ್ರೀ ಆರ್. ದಯಾನಂದ್‌ರಾವ್(ಗಾಂಧಿನಗರ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಲಾಲ್‌ಬಾಗ್ ಹಾಗೂ ಕಬ್ಬನ್ ಪಾರ್ಕ್‌ಗಳನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಒಂದು ಸಮಗ್ರ ಯೋಜನೆಯನ್ನು ಸರ್ಕಾರವು ತಯಾರಿಸಿರುವುದೇ?

ಆ) ಇಲ್ಲದಿದ್ದಲ್ಲಿ ಈ ಪಾರ್ಕ್‌ಗಳನ್ನು ಅಭಿವೃದ್ಧಿಗೊಳಿಸಲು ಒಂದು ಸಮಗ್ರ ಯೊಜನೆಯನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಇ) 1993-94ನೇ ಸಾಲಿನಲ್ಲಿ ಈ ಪಾರ್ಕ್‌ಗಳ ಅಭಿವೃದ್ಧಿಗಾಗಿ ಗೊತ್ತುಪಡಿಸಿದ ಹಣವೆಷ್ಟು?

ಈ) ಇದರಲ್ಲಿ ಈಗಾಗಲೇ ಖರ್ಚು ಮಾಡಿರುವ ಹಣವೆಷ್ಟು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು)

ಹೌದು

ಸಮಗ್ರ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1993-94ನೇ ಸಾಲಿನಲ್ಲಿ ಈ ಪಾರ್ಕ್‌ಗಳ ಅಭಿವೃದ್ಧಿಗಾಗಿ ಗೊತ್ತುಪಡಿಸಿದ ಹಣ (ಲಕ್ಷರೂ.ಗಳಲ್ಲಿ)

		ಯೋಜನೆ	ಯೋಜನೇತರ	ಒಟ್ಟು
1.	ಲಾಲ್‌ಬಾಗ್ ಸಸ್ಯತೋಟ	25.00	17.66	42.66
2.	ಕಬ್ಬನ್ ಉದ್ಯಾನವನ	10.00	19.95	29.95
	ಒಟ್ಟು	35.00	37.61	72.61

ಈಗಾಗಲೇ ಖರ್ಚಾಗಿರುವ ಹಣ(ಲಕ್ಷ ರೂ.ಗಳಲ್ಲಿ)

		ಯೋಜನೆ	ಯೋಜನೇತರ	ಒಟ್ಟು
1.	ಲಾಲ್‌ಬಾಗ್ ಸಸ್ಯತೋಟ	0.75	8.10	8.85
2.	ಕಬ್ಬನ್ ಉದ್ಯಾನವನ	0.60	10.32	10.92
ಒಟ್ಟು		1.35	18.42	19.77